'ನನಗೇಕೆ ಕಿವಿ ಬಂದಾದ ಮೇಲೆ ಮಾತಾಡುವ ಆಸೆ ತುಂಬಾ ಜಾಸ್ತಿಯಾಗಿಬಿಟ್ಟಿದೆ? ಇಲ್ಲದಿದ್ದರೆ ಸೀತಾ, 'ನ್ಯೂ ಇಯರ್ ಪಾರ್ಟಿಗೆ ನೀವೂ ಬನ್ನಿ ಆಂಟಿ' ಅಂತ ಸನ್ನೆಯಲ್ಲಿ ಕರೆದಿದ್ದೇ ತಡ, ಕಡ್ಡಿ ಜರಿಯಂಚಿನ ಸೀರೆಯುಟ್ಟು ತುರುಬು ಕಟ್ಟಿಕೊಂಡು ಹೋಗಿದ್ದು ಸ್ವತಃ ಮಾಡಿದಡಿಗೆ ತಿಂದು ನಾಲಿಗೆ ಜಡ್ಡುಗಟ್ಟಿತ್ತೆಂದಾ? ಇಲ್ಲಾ ಮಂದಿಯೊಡನೆ ಕೂಡಾಡುವ, ಮಾತಾಡುವ ಹಪಹಪಿಗಾ?' ಅಂತ ಮತ್ತೆ ಮತ್ತೆ ಸರಯೂ ತಮ್ಮನ್ನು ತಾವೇ ಹಳಿದುಕೊಂಡರು.

ಅವರಿಗೆ ನೆನ್ನೆಯ ಪಾರ್ಟಿಯ ಚಿತ್ರ ಕಣ್ಮುಂದೆ ಬಂತು. ಸೀತಾಳ ಮನೆಯ ಟೆರೇಸ್‌ನಲ್ಲೇ ಪಾರ್ಟಿ ಇದ್ದುದು. ಅಲ್ಲಲ್ಲಿ ನಾಲ್ಕೈದು ಜನರ ಚಿಕ್ಕ ಚಿಕ್ಕ ಗುಂಪುಗಳು, ಕೈಯಲ್ಲಿ ಕೆಂಪು, ಹಳದಿ, ಕಪ್ಪು ಇನ್ನೂ ಏನೇನೋ ಬಣ್ಣದ ಜ್ಯೂಸ್ ಗ್ಲಾಸ್‌ಗಳು, ಮಾತು ಮಾತಿಗೂ ನಗುವ ಲಿಪ್ ಸ್ಟಿಕ್ ತುಟಿಗಳು ಒಳ್ಳೆ ಮ್ಯೂಟ್ ಮಾಡಿದ ಟೀವಿ ಸಿನಿಮಾದಂತೆ! ಏನು ಮಾಡಲೂ ತೋಚದೆ ಹೋಗುವ ಬರುವ ಜನರನ್ನು ನೋಡ್ತಾ ಮೂಲೆಯ ಸೋಫಾದ ಮೇಲೆ ಕೂತುಕೊಂಡಿದ್ದಾಗ ನೆಲಕ್ಕಲೆಯುತ್ತಿದ್ದ ಗಾಗರಾ ಚೋಲಿ ಹಾಕಿದ್ದ ಯುವತಿಯೊಬ್ಬಳು ತಟ್ಟೆಯೊಂದನ್ನು ಹಿಡಕೊಂಡು ಬಂದು ಎದುರು ನಿಂತಿದ್ದಳು. ತಟ್ಟೆಯ ತುಂಬಾ ಗರಿಗರಿ ಪಕೋಡಾಗಳು. ಮೋರೆಯ ತುಂಬ ಮುದ್ದಾದ ನಸುನಗು. ನಗ್ತಾ ಏನೇನೋ ಹೇಳುತ್ತಿದ್ದಳವಳು. 'ಓ, ಬಹುಶಃ ತಮ್ಮ ಕಿವಿಯ ಬಗ್ಗೆ ಇವಳಿಗೆ ಗೊತ್ತಿಲ್ಲ. ನಾನಾದ್ರೂ ಯಾಕೆ ಎಲ್ಲರೆದುರು ಹೇಳಿ ಐಬು ತೋರಿಸಿಕೋ ಬೇಕು?' ಅಂತ ಇವರೂ ಅವಳು ಹೇಳಿದ್ದಕ್ಕೆಲ್ಲ ಸುಮ್ಮನೆ ತಲೆಯಾಡಿಸಿ ನಕ್ಕು ಅವಳ ಕೈಲಿದ್ದ ತಟ್ಟೆಯಿಂದ ಪಕೋಡಾವೊಂದನ್ನು ಎತ್ತಿಕೊಂಡು ಬಾಯಿಗೆಸೆದುಕೊಂಡಿದ್ದರು. ಕೂಡಲೇ ಮೀರಾ ಎಲ್ಲಿದ್ದಳೋ ಓಡೋಡಿ ಬಂದಿದ್ದಳು. ಥೂ ಥೂ ಅಂತ ಉಗುಳುವಂತೆ ಸನ್ನೆ ಮಾಡಿದ್ದು ತಿಳಿದು ತಕ್ಷಣ ಬಾಯಲ್ಲಿದ್ದ ಚೂರು ಉಗುಳಿದ್ದರು. ಅದು ಮಾಂಸದ ಪಕೋಡವೆಂದು ತಿಳಿದಾಗ ಹೃದಯ ನಿಂತಂತಾಗಿತ್ತು. ನೀರು ಹಾಕಿ ಮುಕ್ಕಳಿಸಿ ಬಾಯಿ ತೊಳಕೊಂಡರೂ ಎಂಜಲಂತೂ ಒಳಹೋಗಿಬಿಟ್ಟಿತಲ್ಲ ಅಂತ ಗೋಳಾಡಿ ಅತ್ತಿದ್ದರು. ಇವರ ರಂಪಾಟ ನೋಡಿ ಅಲ್ಲಲ್ಲಿ ಹರಟೆ ಹೊಡೆಯುತ್ತ ನಿಂತಿದ್ದ ಜನವೆಲ್ಲ ಇವರತ್ತಲೇ ಬಂದಿತ್ತು. 'ಹಿಯರಿಂಗ ಏಡ್ ಯಾಕ್ಹಾಕಿಲ್ಲ?' ಅಂತ ಯಾರೋ ಕೇಳಿದ್ರು.

'ಇಂಥಾ ಸಂಪ್ರದಾಯದ ಜನಕ್ಕೆ ಈ ಥರದ ಪಾರ್ಟೀಲೇನು ಕೆಲಸ?'

'ಏನೋ ಬಾಯಿ ಚಪಲ ಪಾಪ. ಹಿಂದೆಲ್ಲಾ ತೀರದ ಹಂಬಲ ಈಗ ತೀರಿಸ್ಕೋತಾರೇನೋ'

'ಮತ್ತ್ಯಾಕಂತೆ ಇಂಥಾ ರಂಪಾ ಮಾಡೋದು?'

ಪಿಸುದನಿಯಲ್ಲಿ ನಗಾಡಿದ ಜನರ ಟೀಕೆ, ನಾನಾ ಸಲಹೆ, ವಿಚಿತ್ರ ನೋಟಗಳಿಂದ ಭೂಮಿಗಿಳಿದು ಹೋಗಿದ್ದರು ಸರಯೂ.

ಸರಯೂಗೆ ಇದೀಗ ಬಾಯಿಯಿಂದ ಹೊಟ್ಟೆಯವರೆಗೆ ವಿಚಿತ್ರ ಸಂಕಟವಾಯ್ತು. ಯಾವುದೋ ಬೆಂಕಿಯ ಸುಳಿಯೊಂದು ಕರುಳುಗಳನ್ನೆಲ್ಲ ನುಲಿಯುತ್ತ ಮೇಲೆದ್ದು ಬಂತು, ಅದರೊಟ್ಟಿಗೇ ಮರೆತ ರಾಶಿ ನೆನಪುಗಳೂ.

ಆರು ವರ್ಷಗಳ ಕೆಳಗೆ ಕೇಶವ ಮೂತ್ರಕೋಶದ ತೊಂದರೆಯಿಂದ ಪೂರಾ ಹಾಸಿಗೆ ಹಿಡಿದಾಗ, ಒದರಾಟ ಹೋಗಲಿ ಬಾಯಿಯಿಂದ ಸ್ವರವೇ ಏಳದಷ್ಟು ನಿತ್ರಾಣನಾಗಿಬಿಟ್ಟಿದ್ದ. ಆದರೂ ಸರಯೂ ಕೋಣೆಗೆ ಬಂದರೆ ಸಾಕು – ದಿಟ್ಟಿಸಿ ನೋಡುತ್ತ ಮಂಚ ತಟ್ಟಿ 'ಕೂಡು ಕೂಡು' ಅಂತ ಕೈ ಹಿಡಿದೆಳೆದು ಒಂದೇ ಸಮನೆ ಕಾಡುತ್ತಿದ್ದ. ಆದರೆ, ಅವನ ಮೂತ್ರದ ಚೀಲದಿಂದ ತೊಟ್ಟಿಕ್ಕಿ ಹೊಲಸಾಗಿರುತ್ತಿದ್ದ ಹಾಸಿಗೆ ಹೊದಿಕೆ ಬದಲಾಯಿಸಿ ಒಗೆಯುವುದರಲ್ಲಿ, ಅವನಿಗೆ ಬಿಸಿ ಗಂಜಿ ಕಾಸಿ ಕುಡಿಸುವಷ್ಟರಲ್ಲೇ ದಿನ ಕಂತಿ ಹೋಗುತ್ತಿದ್ದ ಸರಯೂಗೆ ಸಮಯವಾದರೂ ಎಲ್ಲಿರುತ್ತಿತ್ತು? ಅಲ್ಲದೆ ಅವ ಮೂಳೆಚಕ್ಕಳವಾದ ಬೆರಳುಗಳಲ್ಲಿ ತನ್ನ ತೋಳು ಹಿಡಿದಾಗ ಬೆನ್ನ ಹುರಿಗುಂಟ ಎದ್ದ ಮುಳ್ಳು... ಅವರು ಯಾರಿಗೆ ತಾನೆ ತೋರಿಸಬಹುದಿತ್ತು? ಆದ್ದರಿಂದಲೇ 'ಅರೆ ನಿಮ್ಮೆದುರು ಒಬ್ಬಳೇ ಹುಚ್ಚಳಂತೆ ಮಾತಾಡ್ತಾ ಕೂಡ್ಲಾ? ನಂಗೆ ಟೈಮಿಲ್ಲ, ಇನ್ನೂ ನಿನ್ನೆಯ ನಿಮ್ಮ ಕೆಟ್ಟು ನಾರೋ ಹೊದಿಕೆ ತೊಳೆದು ಹಾಕಿಲ್ಲ ನಾ. ಆ ಕಕ್ಕಸಿನ ಪ್ಯಾನೇನು ಹಂಗೆ ಜಾದೂವಿನಿಂದ ಸ್ವಚ್ಛವಾಗ್ತದೆ ಅಂದ್ಕೊಂಡ್ರಾ? ತಿಕ್ಕಿ ತಿಕ್ಕಿ ಕೈ ಹೋಯ್ತು ನಂದು' ಅಂತ ಬೇಕಂತಲೇ ಅವನ ಅವಸ್ಥೆಯನ್ನು ನೆನಪಿಸುವ ಕೆಲಸಗಳದ್ದೇ ಪಟ್ಟಿ ಒದರಿ ಒಳಹೋಗಿಬಿಡುತ್ತಿದ್ದರು.